'ದರ್ಶನ'ದ ಜಿಗಿತದೊಳಗೆ ತೋರುವಲ್ಲಿ ಕೊಂಚ ಹಿಂದೆ ಬೀಳುತ್ತವೆ ಅನ್ನಿಸಿದೆಯೇ ಹೊರತು, (ಕೆಲವರು ಬೊಟ್ಟುಮಾಡಿ ಹೇಳುವಂತೆ) ಎಲ್ಲಿಯೂ ಅವರು ಮೂಲಭೂತವಾದದ ಮಂಡನೆಯಲ್ಲಿ ತೊಡಗಿದ್ದಾರೆ ಅನ್ನಿಸುವುದಿಲ್ಲ. ಒಂದು ಕವಿತೆಯ ನಿಲುವು, ಭಾಷಾ ಪ್ರಯೋಗ, ಲಯಗಾರಿಕೆ ಇತ್ಯಾದಿಗಳನ್ನು ನಾವು ಒಪ್ಪುವುದು ಅಥವಾ ಬಿಡುವುದು ಬೇರೆಯೇ ಚರ್ಚೆ. ಆದರೆ ಉಡಾಫೆ ಹೇಳಿಕೆಗಳು, ದ್ವೇಷದ ಮಾತಿನಿಂದ, ಓದಿನ ಹಿನ್ನೆಲೆಯ ಕೊರತೆಯಿಂದ ನಾವು ಭಾಷೆಯ ಘನತೆಯನ್ನು ಕುಗ್ಗಿಸುವ ಕೆಲಸ ಮಾಡಬಾರದು. ಹಾಗೆ ಮಾಡುವುದು ಕನ್ನಡ ಕಾವ್ಯದ ಆತ್ಮಸಾಕ್ಷಿಗೆ ಮಸಿ ಬಳಿದ ಹಾಗೆ ಎನ್ನುವ ಎಚ್ಚರ ಇಟ್ಟುಕೊಂಡಿರಬೇಕು. ಯುವಪೀಳಿಗೆಯವರ ಕವಿತೆಗಳನ್ನು ಆಸ್ಥೆಯಿಂದ ಓದಿ ಪ್ರತಿಕ್ರಿಯಿಸುತ್ತಿದ್ದ, ಕಿರಿಯರನ್ನು ಒಳಗೊಳ್ಳಲು ಇಷ್ಟಪಡುತ್ತಿದ್ದ ಎಚ್‌ಎಸ್‌ವಿ ಅವರ ಕಾವ್ಯವನ್ನು ಅರ್ಥಮಾಡಿಕೊಳ್ಳುವ ಬೇರೆಬೇರೆ ಓದುಗಳನ್ನು, ಮಾರ್ಗಗಳನ್ನು ಕನ್ನಡ ಕಾವ್ಯದ ಆರೋಗ್ಯ ದೃಷ್ಟಿಯಿಂದ ನಾವು ಇನ್ನಾದರೂ ಕಂಡುಕೊಳ್ಳಬೇಕಿದೆ.

* * *

ಈ ವೃತ್ತಾಂತವನ್ನು ಹೇಳದೆ ಇರಲಾಗದು: ಪುತಿನ ಅವರ 'ಮಲೆದೇಗುಲ'ದ ಕವಿತೆಗಳ ಕುರಿತಾಗಿ ನನ್ನ ಅನುಮಾನ, ಗೊಂದಲಗಳನ್ನು ಎಚ್‌ಎಸ್‌ವಿ ಅವರ ಬಳಿ ಆಗೀಗ ಕೇಳುತ್ತಿದ್ದೆ. ಅಂತಹ ಒಂದು ಮಾತುಕತೆಯಲ್ಲಿ ನಾನು, ''ಪುತಿನರನ್ನು 'ಭಕ್ತಕವಿ' ಎಂದು ಕರೆದು, ಆ ಗೂಟಕ್ಕೆ ಸಿಕ್ಕಿಸುವುದು ಅವರ ಘನ ಚಿಂತನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ಸೋತಿರುವುದನ್ನು ತೋರಿಸುತ್ತೆ'' ಅಂದೆ. ಎಚ್‌ಎಸ್‌ವಿ ಅವರು ಆ ತಕ್ಷಣ, 'ಹಾಗಾದರೆ ಒಂದು ಕೆಲಸ ಮಾಡು, ಮಲೆದೇಗುಲದ ಬಗ್ಗೆ ನೀನು ಬರಿ, ಈ ಕಾಲದವರು ಅದನ್ನು ಹೇಗೆ ಓದುತ್ತಾರೆ ಅನ್ನೋದು ತಿಳಿಯತ್ತೆ, ಪ್ರಕಟಿಸುವ ಜವಾಬ್ದಾರಿ ನನ್ನದು' ಅಂದರು. ಅವರ ದನಿಯಲ್ಲಿ ಸವಾಲಿರಲಿಲ್ಲ, ನಿಜವಾಗಿ ನಾನು ಅದರ ಬಗ್ಗೆ ಬರೆಯಬೇಕು ಅನ್ನುವ ಆಸೆಯಿತ್ತು. ಆ ಪುಸ್ತಕದ ಕುರಿತು ಏನಾದರೂ ಬರೆಯಬೇಕು ಎನ್ನುವ ನನ್ನ ಆಸೆ ಮತ್ತು ಹಂಬಲವು ಆ ದಿನ ಎಚ್‌ಎಸ್‌ವಿ ಅವರ ಉಮೇದಿನ ಜೊತೆ ಸೇರಿಕೊಂಡಿತೆನ್ನಬಹುದು. ಬರೆಯುತ್ತೇನೆ ಎಂದು ಒಪ್ಪಿಕೊಂಡದ್ದೇನೋ ಆಯಿತು. ನಿಜವಾದ ಸಮಸ್ಯೆ ಶುರು ಆದದ್ದು ಆನಂತರ. ಎಚ್‌ಎಸ್‌ವಿ ಅವರು ಆಗೀಗ ಕರೆ ಅಥವಾ ಮೆಸೇಜ್ ಮಾಡಿ ಈ ಕೆಲಸವನ್ನು ನೆನಪಿಸತೊಡಗಿದರು. ಸ್ವಲ್ಪ ದೂರ ಸರಾಗವಾಗಿ ಸಾಗುತ್ತಿದ್ದ ಕವಿತೆಗಳ ವಿಶ್ಲೇಷಣೆಯ ಕೆಲಸವು ನಡುನಡುವೆ ಕಲ್ಲುಬಂಡೆಯ ಹಾಗೆ ಕುಳಿತುಬಿಡುತ್ತಿತ್ತು. ಈ ನಡುವೆ ಎಚ್‌ಎಸ್‌ವಿ ಅವರ ಆರೋಗ್ಯವು ಕ್ಷೀಣಿಸತೊಡಗಿತ್ತು. ಅವರು ಕೇಳುವುದನ್ನು ಬಿಟ್ಟರು, ನಾನೂ ಇದರ ಬಗ್ಗೆ ಮರೆತಂತೆ ಇದ್ದುಬಿಟ್ಟೆ. ಒಂದು ದಿನ ಏಕಾಏಕಿ ಅವರ ಫೋನು! ದನಿ ದಣಿದಿತ್ತು. ಅವರ ಮೊದಲ ವಾಕ್ಯ, 'ತೇಜಶ್ರೀ, ಬರವಣಿಗೆ ಎಲ್ಲಿಗೆ ಬಂತಮ್ಮ?' ಎಂಬುದಾಗಿತ್ತು. ಏನು ಹೇಳಲೂ ತಿಳಿಯದೆ ನಾನು ಮೌನವಾಗಿದ್ದೆ. ಅದೇ ದಣಿವಿನ ದನಿಯಲ್ಲಿ ಅವರು, 'ಬೇಗ ಬರೆದು ಮುಗಿಸಿ ಕೊಡಮ್ಮ, ನಾನು ಇರುವಷ್ಟರಲ್ಲಿ ಇದು ಪ್ರಕಟ ಆಗಬೇಕು ಅಂತ ನನ್ನಾಸೆ' ಎಂದರು. ಈ 'ಇರುವಷ್ಟರಲ್ಲಿ' ಎಂಬ 'ಒಕ್ಕಟ್ಟು' ಪದವು ನನ್ನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿತು. ಆಗ, ಹೊಸ ಸರ್ಕಾರ ರಚನೆಯಾಗಿತ್ತು. ಪುತಿನ ಟ್ರಸ್ಟ್‌ನ ಅಧ್ಯಕ್ಷರಾಗಿ ತಮ್ಮ ಸೇವಾವಧಿ ಮುಗಿಯಬಹುದು, ಅಷ್ಟರೊಳಗೆ ಈ ಪುಸ್ತಕ ಪ್ರಕಟಿಸಬೇಕು ಎನ್ನುವ ಉದ್ದೇಶ ಅವರ ಮಾತಿನಲ್ಲಿತ್ತು. ಅಥವಾ ಅವರಿಗೆ ಇವು ತಮ್ಮ ಕೊನೆಯ ದಿನಗಳು ಅಂತಲೂ ಅನ್ನಿಸಿರಬಹುದು.

ಅಂತೂ ಇಂತೂ 'ಮಲೆದೇಗುಲ' ಕುರಿತ ನನ್ನ ವಿಶ್ಲೇಷಣೆ ಮತ್ತು ದೀರ್ಘ ಪ್ರಸ್ತಾವನೆ ಮುಗಿದು, ಅದನ್ನು ಎಚ್‌ಎಸ್‌ವಿ ಅವರಿಗೆ ಕಳುಹಿಸಿಕೊಟ್ಟೆ. ಅವರು ತಕ್ಷಣ ಓದಿ 'ನಿನ್ನ ಪ್ರಸ್ತಾವನೆ ಘನವಾಗಿದೆ. ಮತ್ತೆ ಮತ್ತೆ ಯೋಚಿಸುವಂತೆ ಮಾಡುತ್ತದೆ. ಈವರೆಗೆ ಮಲೆದೇಗುಲದ ಬಗ್ಗೆ ಬಂದ ಪ್ರಬಂಧಗಳಲ್ಲಿ ಇದು ಅತ್ಯುತ್ತಮ' ಎಂದು ಮೇಲ್ ಮಾಡಿದರು. ಏನನ್ನೋ ಒಳಗೊಂಡ ತಿಳಿವು ನನ್ನೊಳಗೆ ಆಡಿತು. ಎಚ್‌ಎಸ್‌ವಿ ಅವರ ಪ್ರೀತಿಯ ಒತ್ತಡ ಇಲ್ಲದೆ ಹೋಗಿದ್ದರೆ ಬಹುಶಃ ನಾನು ಆ ಕೃತಿಯ ಕೆಲಸವನ್ನು ಪೂರೈಸುತ್ತಿರಲಿಲ್ಲ.

ಕೆಲ ತಿಂಗಳುಗಳ ಹಿಂದೆ ಅವರನ್ನು ನೋಡಲು ಹೋದಾಗ ನನ್ನ ಕೈಯನ್ನು ಹಿಡಿದು ಅವರು ಹೇಳಿದ ಮಾತು, 'ಅಂತೂ ನಾನು ಇರುವಷ್ಟರಲ್ಲೇ ಬರೆದು ಕೊಟ್ಟೆಯಲ್ಲ, ಸಂತೋಷ' ಅಂತ.

ಅವರ ಮೆತ್ತನೆ ಕೈಗಳ ಬೆಚ್ಚನೆ ಬಿಸುಪು ಈಗಲೂ ನನ್ನ ಅಂಗೈಯಲ್ಲಿದೆ. ●